ನೀರು ಹೋಗಿ ಎ.ಸಿ ಹಾಳಾಗಿದೆ. ರಿಪೇರಿಯಾಗಿ ಬಂದ ಮೇಲೆ ಹಾಕುತ್ತೇವೆ ಎಂದರು. ಯಾರೋ ಒಂದಿಬ್ಬರು ಕಿಸಕ್ಕೆಂದರು. ಅಷ್ಟಕ್ಕೆ ಮತ್ಯಾರಿಗೋ ಮತ್ತೇನೋ ನೆನಪಾಗಿ ಈ ವರ್ಷ ಚಳಿಯೇ ಇಲ್ಲ ನೋಡಿ! ಎಂದರು. ಪೂರ್ತಿ ಇಳಿದ ಮೇಲೆ ಚಳಿಯೇನು ರಾಯರೇ! ಚಳಿ ಇಲ್ಲ, ಇನ್ನು ಮುಂದೆ ಚಳಿ ಇರುವುದಿಲ್ಲ! ಆಳುವವರಿಗೂ ಇಲ್ಲ, ಆಳಿಸಿಕೊಳ್ಳುವವರಿಗೂ ಇಲ್ಲ ಎಂದರು ಕಂಡಕ್ಟರ್. ಯಾರಿಗೆ ಎಷ್ಟು ಅರ್ಥ ಆಯಿತೋ?

ಮಹಿಳೆಯರಿಗೆ ಉಚಿತ ಪ್ರಯಾಣ ಎಂದಾದ ಮೇಲೆ ಕಂಡಕ್ಟರರಿಗೆ ಎಲ್ಲರ ಆಧಾರ್ ಕಾರ್ಡ್ ಪರಿಶೀಲಿಸುವ ಕೆಲಸ. ಅದು ಅವರ ಬ್ಯಾಗ್, ಪರ್ಸ್, ಜೇಬು ಇತ್ಯಾದಿ ಎಲ್ಲಿಯೋ ಅಡಗಿಕೊಂಡಿರುತ್ತದೆ. ಹತ್ತಿದ ಕೂಡಲೇ ಅದನ್ನು ತೆಗೆದು ಇಟ್ಟುಕೊಂಡಿರುವುದಿಲ್ಲ. ಕಂಡಕ್ಟರ್ ಹತ್ತಿರ ಬಂದ ಮೇಲೆಯೇ ಹುಡುಕಾಟ ಶುರು. ಕೆಲವೊಮ್ಮೆ ಇವರ ಆಧಾರ್ ಕಾರ್ಡ್ ಬಸ್ಸಿನಲ್ಲಿ ಎಲ್ಲಿಯೋ ಕುಳಿತ ಮಗನೋ, ಮಗಳೋ, ಗಂಡನೋ, ಅಪ್ಪನೋ ಅವರ ಕೈಯಲ್ಲಿ ಇರುತ್ತದೆ. ಕಂಡಕ್ಟರ್ ಅವರನ್ನು ಹುಡುಕಿಕೊಂಡು ಹೋಗಬೇಕು. ಐವತ್ತು ಜನ ಹತ್ತಿ ಇಳಿದು ಬಂದು ಹೋದರು. ನಾನು ಬಸ್ಸಿಗೆ ಒಂದು ಸುತ್ತು ಬಂದೆ. ಆದರೂ ಆಧಾರ್ ಕಾರ್ಡ್ ಒಂದಕ್ಕೆ ಹೊರಬರಲಿಕ್ಕೆ ಆಗಲಿಲ್ಲವಲ್ಲಾ?

ಕಂಡಕ್ಟರ್ ಗಡಿಬಿಡಿಯಲ್ಲಿರುತ್ತಾರೆ. 'ಅದನ್ನೆಲ್ಲ ಎಲ್ಲಿ ಪರೀಕ್ಷೆ ಮಾಡಲಿಕ್ಕೆ ಹೋಗುತ್ತಾರೆ' ಎಂದುಕೊಂಡು ಅವರದ್ದು ಇವರದ್ದು ಎಲ್ಲಿಯದೋ ಆಧಾರ್ ಕಾರ್ಡ್‌ನ ಜೋಲು, ಜೂಲು ಬಿದ್ದ ಜೆರಾಕ್ಸ್ ಪೇಪರನ್ನು ಬೀಸಣಿಗೆ ಬೀಸಿದಂತೆ ಅವರ ಮುಖದ ಮುಂದೆ ಬೀಸಿ ಕಂಡಕ್ಟರ್‌ರನ್ನು ಮಂಗ ಮಾಡುವ ಬುದ್ಧಿವಂತರಿರುತ್ತಾರೆ. ಇನ್ನು ಕೆಲವರು ಮಹಾ ಸಂಭಾವಿತರು. ಕಂಡಕ್ಟರ್ ನೋಡಬೇಕು ಅಷ್ಟೇ, ಪರಿಶೀಲಿಸಬಾರದು; ಕಂಡಕ್ಟರ್ ಕಣ್ಣು ಸಣ್ಣದು ಮಾಡಿ ಇವರ ಮುಖ, ಆಧಾರ ಕಾರ್ಡಿನಲ್ಲಿರುವ ಗೆರೆಗೆರೆ, ಮಸುಕುಮಸುಕು ಮುಖ ಹೋಲಿಕೆ ನೋಡಿದರೆ ಇವರಿಗೆ ದುಃಖವಾಗುತ್ತದೆ, ಸಿಟ್ಟು ಬರುತ್ತದೆ. 'ನಾವೇನು ಕಳ್ಳರೇ, ಮೋಸಗಾರರೇ?' ಇನ್ನು ಅವರು ಬುರ್ಖಾಧಾರಿಗಳಾದರೆ ಬಿಡಿ, ಅವರನ್ನು ಕೇಳುವ ಧೈರ್ಯ ಇವರಿಗೂ ಇಲ್ಲ. ಆಧಾರ್ ಕಾರ್ಡ್ ಕೊಡುವ ಕಂಪನಿಗೆ ಕೋಟಿ ಕೋಟಿ ಸಂಬಳ, ಅನುದಾನ, ಸಂಭಾವನೆ ಕೊಟ್ಟುಬಿಟ್ಟರೆ ಕೆಲಸ ಮುಗಿಯಿತು; ದಿನದಿನವೂ ಅದರ ಪರಿಶೀಲನೆಯ ಕೆಲಸ ಕರ್ನಾಟಕದ ಕಂಡಕ್ಟರ್‌ಗಳಿಗೆ!

